# ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ–೨೦೧೯
# ಪ್ರದಾನ ಸಮಾರಂಭ ಹಾಗೂ ಉಪನ್ಯಾಸ




ಧಾರವಾಡ: ಎಲ್ಲಾ ಕ್ಷೇತ್ರದಲ್ಲಿ ಸಮರ್ಥವಾಗಿ ಬಾಳಿದವರು ಬಿ.ಕೆ. ಹೊಂಗಲ ಅವರು. ಯಾರು ಸತ್ಯದ ಹಿನ್ನೆಲೆಯನ್ನು ಬೆನ್ನು ಹತ್ತಿ ಹೋಗಿರುತ್ತಾರೆ. ಅವರಿಗೆ ಸಂಕಷ್ಟಗಳು ಹೆಚ್ಚು ಬರುತ್ತವೆ. ಅಂತಹ ಸಂಕಷ್ಟಗಳನ್ನು ಸಮರ್ಥವಾಗಿ ನಿಭಾಯಿಸಿದವರು ಹೊಂಗಲ ಮಾಸ್ತರ ಒಬ್ಬರು ಎಂದು ಬೆಳಗಾವಿಯ ಲಿಂಗರಾಜ ಕಾಲೇಜಿನ ಉಪನ್ಯಾಸಕರಾದ ಡಾ. ಗುರುದೇವಿ ಹುಲೆಪ್ಪನವರಮಠ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕವಿ ಬಿ.ಕೆ.ಹೊಂಗಲ ದತ್ತಿ ಕಾರ್ಯಕ್ರಮ ಅಂಗವಾಗಿ ದಿನಾಂಕ ೨೦–೪–೨೦೧೯ ರಂದು ಆಯೋಜಿಸಿದ್ದ ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ–೨೦೧೯ ಪ್ರದಾನ ಸಮಾರಂಭ ಹಾಗೂ ಉಪನ್ಯಾಸದಲ್ಲಿ **‘ಮಕ್ಕಳ ಸಾಹಿತ್ಯ ಸ್ವರೂಪ ದರ್ಶನ’** ವಿಷಯದ ಮೇಲೆ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಗುರುದೇವಿ ಹುಲೆಪ್ಪನವರಮಠ, ಮಕ್ಕಳಲ್ಲಿನ ಸೃಜನಶೀಲತೆಯನ್ನು ಅರಳಿಸುವ, ಪ್ರಚೋದಿಸುವ ಅವರ ಕಲ್ಪನೆಯನ್ನು ಹೆಚ್ಚಿಸುವಂತಹ ಸಾಹಿತ್ಯ ಹೆಚ್ಚು ಹೆಚ್ಚು ಬರಬೇಕು. ಅದರಲ್ಲೂ ಆಟೋಟದೊಂದಿಗೆ ಪಥ್ಯದ ವಸ್ತವನ್ನು ಅಳವಡಿಸಿಕೊಂಡು ಮುಂದುವರೆಯುವ ಅವಶ್ಯಕತೆ, ಮಕ್ಕಳ ಸಾಹಿತ್ಯದಲ್ಲಿ ಕುತೂಹಲಕಾರಿಯಾದ ಭಿನ್ನವಾದ ವಸ್ತುಗಳನ್ನು ಅಳವಡಿಸಬೇಕಾದ ಅನಿವಾರ್ಯತೆ ಇದೆ. ಮಕ್ಕಳ ಸಾಹಿತ್ಯದಲ್ಲಿ ಪಶು, ಪಕ್ಷಿ, ನಿಸರ್ಗ ನಿತ್ಯ ಸಂಪರ್ಕದ ವಸ್ತು, ಕ್ರೀಡೆಗಳನ್ನು ಅಳವಡಿಸಿಕೊಂಡು ಲಯ, ಪ್ರಾಸದೊಂದಿಗೆ ರಚಿಸಿದರೆ ಆ ಸಾಹಿತ್ಯ ಹೆಚ್ಚು ಜನಪ್ರಿಯತೆ ಪಡೆಯುತ್ತೆ ಎಂದರು.

ಮಕ್ಕಳ ಸಾಹಿತಿ ಈಶ್ವರ ಕಮ್ಮಾರ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿ, ಮಕ್ಕಳಲ್ಲಿ ನೈತಿಕ ಮೌಲ್ಯದೊಂದಿಗೆ ಸಮಾಜದಲ್ಲಿ ಸುಸಂಸ್ಕೃತ ನಾಗರಿಕರನ್ನಾಗಿ ಬೆಳೆಸುವ ಶಿಕ್ಷಣವನ್ನು ಪ್ರತಿಯೊಬ್ಬ ಶಿಕ್ಷಕನೂ ನೀಡಬೇಕು. ಅಂತಹ ಕೆಲಸವನ್ನು ಶಿಕ್ಷಕ ಕವಿ ಬಿ.ಕೆ. ಹೊಂಗಲ ಮಾಡಿದ್ದಾರೆ. ಒಬ್ಬ ಶಿಕ್ಷಕ ಮತ್ತೊಬ್ಬ ಶಿಕ್ಷಕನಿಗೆ ಗೌರವಿಸುವ ಕೆಲಸ ದೊಡ್ಡದು & ವೃತ್ತಿಯನ್ನು ಗೌರವಿಸಿಕೊಂಡಂತೆ ಎಂದರು.

ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ–೨೦೧೯ನ್ನು ಸ್ವೀಕರಿಸಿ ಮಾತನಾಡಿದ ಮಕ್ಕಳ ಸಾಹಿತಿ ಶಿವಪ್ರಸಾದ ಹುಲೆಪ್ಪನವರಮಠ, ನಾನೊಬ್ಬ ಶಿಕ್ಷಕನಾಗಿ ‘ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ’ ಸ್ವೀಕರಿಸುತ್ತಿರುವುದು ಸಂತೋಷದ ಸಂಗತಿ. ಅದರಲ್ಲೂ ಈಶ್ವರ ಕಮ್ಮಾರ ಅವರಿಂದ ಸ್ವೀಕರಿಸಿದ್ದು ಸಂತೋಷದ ಸುದಿನ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಧಾರವಾಡ ಆಕಾಶವಾಣಿ ಕೇಂದ್ರದ ಕಾರ್ಯಕ್ರಮದ ಅಧಿಕಾರಿಗಳಾದ ಡಾ. ಬಸು ಬೇವಿನಗಿಡದ, ಉತ್ತರ ಕರ್ನಾಟಕ ಸಾಹಿತ್ಯವು ಮಕ್ಕಳ ಸಾಹಿತ್ಯದ ತೊಟ್ಟಿಲಾಗಿದೆ. ಇಲ್ಲಿಯ ಭಾಷೆಯ ಹಿಡಿತ ಮನಸ್ಸಿನ ಮೇಲೆ ಪ್ರಭಾವ ಬೀರುವ ಗ್ರಾಮೀಣ ಭಾಗ ವಸ್ತುಗಳು ಹೆಚ್ಚು ಪ್ರೇರಣೆಯಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬಿ.ಕೆ. ಹೊಂಗಲರ ಮಕ್ಕಳು ಬಿ.ಕೆ. ಹೊಂಗಲ ಅವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಿದರು. ರಾಮದುರ್ಗ ಮತ್ತು ಪಿ.ಎಂ. ಕಣವಿ ಅವರು ಬಿ.ಕೆ. ಹೊಂಗಲ ಅವರನ್ನು ಸನ್ಮಾನಿಸಿದರು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಪುತ್ರ ಬೆಲ್ಲದ, ದತ್ತಿದಾನಿ ಸೋಮನಾಥ ಬಿ. ಹೊಂಗಲ ಇದ್ದರು.

ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ) ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಗಣ್ಯರಿಗೆ ಗ್ರಂಥ ಮತ್ತು ಪುಷ್ಪ ನೀಡಿ ಗೌರವಿಸಿದರು. ಶ್ರೀ ಮನೋಜ ಪಾಟೀಲ ವಂದಿಸಿದರು. ಮಾರ್ತಾಂಡಪ್ಪ ಕತ್ತಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಮತ್ತು ಡಾ. ಆನಂದ ಪಾಟೀಲ, ಶ್ರೀಮತಿ ಶಾಂತಾದೇವಿ ಹುಲೆಪ್ಪನವರಮಠ, ಮಹಾಂತೇಶ ನರೇಗಲ್ಲ, ರಾಮಚಂದ್ರ ಧೋಂಗಡೆ, ಡಾ. ಸುನೀಲ ಪಾಟೀಲ, ಬಸನಗೌಡ್ರ ದೇಸಾಯಿಯವರ, ಶಿವ ಬಿದರಕಟ್ಟಿ, ಕಲ್ಲಪ್ಪ ಬಸಪ್ಪ ಚಂದನಮಟ್ಟಿ, ಡಾ. ರಾಜಶೇಖರ ಬಶೆಟ್ಟಿ, ಚನಬಸಪ್ಪ ಅವರಾದಿ, ಅರಳಿಕಟ್ಟಿ, ಮಧುಮತಿ ಸಣಕಲ್ಲ ಸೇರಿದಂತೆ ಹೊಂಗಲ ಪರಿವಾರದವರು ಭಾಗವಹಿಸಿದ್ದರು.

**ಪ್ರಕಾಶ ಎಸ್. ಉಡಿಕೇರಿ**
ಪ್ರಧಾನ ಕಾರ್ಯದರ್ಶಿಗಳು
ಮೊ : ೯೪೪೮೧–೪೬೮೨೧